## ಖಚಿತವಲ್ಲದ ಸುದ್ದಿ ಪ್ರಸಾರ

ಕನ್ನಡದ ಖಾಸಗಿ ವಾಹಿನಿಗಳ ಸುದ್ದಿ ಪ್ರಸಾರವನ್ನು ನೋಡುತ್ತಿರುವವರಲ್ಲಿ ನಾನೂ ಒಬ್ಬ. ನಾನು ಪತ್ರಿಕೋದ್ಯಮ ಡಿಪ್ಲೊಮ ಅಧ್ಯಯನವನ್ನು ಮಾಡಿದ್ದೇನೆ. ಮಾಧ್ಯಮಗಳು ಯಾವುದೇ ಸುದ್ದಿಯಿದ್ದರೂ ಖಚಿತವಾದ ನಂತರವಷ್ಟೇ ಅದನ್ನು ಪ್ರಸಾರ ಮಾಡಬೇಕೆನ್ನುವುದು ಪತ್ರಿಕೋದ್ಯಮದಲ್ಲಿ ಸ್ಥಾಪಿತ ನಿಯಮ ಹಾಗೂ ನಿಲುವು.

ಆದರೆ ಕೆಲವು ವಾಹಿನಿಗಳ ಸುದ್ದಿ ಪ್ರವಾಚಕರು '........ಅಂತೆ' ಎಂದು ಓದುವುದನ್ನು ನಾನು ಬಹಳ ಸಲ ನೋಡಿದ್ದೇನೆ. ದೃಶ್ಯ ಮಾಧ್ಯಮಗಳು '...ಅಂತೆ' ಎಂದು ಹೇಳುವುದೂ, ಮುದ್ರಣ ಮಾಧ್ಯಮಗಳು '....?' ಹಾಕಿ ಸುದ್ದಿಯನ್ನು ಪ್ರಕಟಿಸುವುದೂ ಆ ಸುದ್ದಿ ಖಚಿತವಲ್ಲವೆನ್ನುವುದನ್ನು ತೋರಿಸುತ್ತದೆ. ಇಂತಹ ಸುದ್ದಿ ಪ್ರಸಾರ ವೀಕ್ಷಕರನ್ನು ಅಡ್ಡ ದಾರಿಗೆಳೆಯುವುದಿಲ್ಲವೇ?

– ಕೊ.ಸು.ನರಸಿಂಹ ಮೂರ್ತಿ, ಮೈಸೂರು

## ವಾಸ್ತವ ಮರೆತರು..

ಕಲರ್ಸ್ ಸೂಪರ್ ವಾಹಿನಿಯಲ್ಲಿ ಪ್ರಸಾರಗೊಳ್ಳುತ್ತಿರುವ 'ಮನೆಯೇ ಮಂತ್ರಾಲಯ' ಧಾರಾವಾಹಿಯಲ್ಲಿ ಮಧುಮತಿಯ ಪ್ರಿಯಕರ ಜೀವನ್ ಅನಿವಾರ್ಯತೆಯಿಂದ ಕೃಷ್ಣವೇಣಿಯನ್ನು ವಿವಾಹವಾದಾಗ, ಆಘಾತದಿಂದ ಮಧುಮತಿಯ ತಾಯಿ ಆಸ್ಪತ್ರೆ ಸೇರುತ್ತಾರೆ. ಮಧುಮತಿ ಅಂದಿನಿಂದಲೂ ಮದುವೆಯ ವೇಷ ಭೂಷಣಗಳಲ್ಲಿಯೇ ಇರುವುದು ವಿಚಿತ್ರವೆನಿಸುವುದು. ಮರುದಿನವಾದರೂ ಮನೆಗೆ ತೆರಳಿ, ವಸ್ತ್ರವನ್ನು ಬದಲಿಸಿ, ಒಡವೆಗಳನ್ನು ತೆಗೆದಿರಿಸಿ ಮತ್ತೆ ಆಸ್ಪತ್ರೆಗೆ ಮರಳಬಹುದಾಗಿತ್ತಲ್ಲವೆ? ಹಾಗೆಯೇ ರೋಗಿಯಾಗಿರುವ ಅವಳಮ್ಮನಿಗೂ ಆಸ್ಪತ್ರೆಯ ದಿರಿಸನ್ನು ತೊಡಿಸಬಹುದಾಗಿತ್ತು.

–ಪೂರ್ಣಿಮಾ ಮೂರ್ತಿ, ಬೆಂಗಳೂರು.

## ಎತ್ತ ಸಾಗುತ್ತಿದೆ ಶನಿ ಧಾರಾವಾಹಿ?

ಪೌರಾಣಿಕ ಕತೆಯೊಂದನ್ನು ತಮ್ಮ ಕಲ್ಪನೆಯಂತೆ ನಿರ್ಮಿಸಿದರೆ ಏನಾಗಬಹುದು ಎಂಬುದಕ್ಕೆ ಶನಿಯೇ ಉತ್ತಮ ಉದಾಹರಣೆ. ಶನಿ ಧಾರಾವಾಹಿ ಈಗ ಗೊತ್ತು ಗುರಿಯಿಲ್ಲದೆ ಎತ್ತೆತ್ತಲೋ ಸಾಗುತ್ತಿದೆ. ಪುರಾಣದಲ್ಲಿ ಶನಿಯ ಬಗ್ಗೆ ಇರುವ ಕತೆಯೆಂದರೆ ಆತ ಯಾರನ್ನು ಹೇಗೆ ಹೇಗೆ ಕಾಡಿದ ಎಂಬುದು. ಅದರಲ್ಲಿ ಮುಖ್ಯವಾದದ್ದು ವಿಕ್ರಮರಾಜನ ಕತೆ. ಮಾರುತಿ ತನ್ನ ಬಾಲ್ಯದಲ್ಲೇ ಶನಿಯನ್ನು ಭೇಟಿಯಾದ ಎಂಬುದಕ್ಕೆ ಯಾವ ಆಧಾರವೂ ಇಲ್ಲ. ಆದರೆ ಶನಿ ಹಾಗೂ ಮಾರುತಿಗೆ ಸಂಬಂಧಿಸಿದಂತೆ ಒಂದು ಕತೆ ಹೀಗಿದೆ.

ಎಲ್ಲರನ್ನು ಕಾಡುವಂತೆ ಶನಿ ಮಾರುತಿಯನ್ನು ಕಾಡಲು ಹೋದಾಗ ಶಕ್ತಿವಂತನಾದ ಮಾರುತಿ ಶನಿಯನ್ನು ಬೋರಲು ಹಾಕಿ ಅವನ ಬೆನ್ನ ಮೇಲೆ ಕುಳಿತು ಶನಿಯ ವಕ್ರದೃಷ್ಟಿಯಿಂದ ತಪ್ಪಿಸಿಕೊಳ್ಳುತ್ತಾನಂತೆ. ಮಾರುತಿಯ ಭಾರವನ್ನು ತಾಳಿಕೊಳ್ಳಲಾದ ಶನಿ ತನ್ನನ್ನು ಕ್ಷಮಿಸುವಂತೆ ಬೇಡಿಕೊಂಡಾಗ ನನ್ನ ಭಕ್ತರನ್ನು ನೀನು ಕಾಡಕೂಡದು ಎಂಬ ವಾಗ್ದಾನವನ್ನು ಶನಿಯಿಂದ ಪಡೆದುಕೊಳ್ಳುತ್ತಾನಂತೆ. ಇಂತಹ ಹಲವು ಕತೆಗಳು ಜನಜನಿತವಾಗಿವೆ, ಕಾಲ್ಪನಿಕವಾಗಿ ಏನೇನೋ ತೋರಿಸುವ ಬದಲಾಗಿ ಇಂತಹ ಕತೆಗಳನ್ನು ತೋರಿಸಬಹುದಲ್ಲವೆ?

– ಮುರಲೀಧರ ಕುಲಕರ್ಣಿ, ಬೀದರ್

## ವಾರದ ಪತ್ರ

## ಚರ್ಚೆಯೂ.. ವಿತಂಡವಾದಗಳೂ..

ದಿನವೂ ಎಲ್ಲ ವಾರ್ತಾ ವಾಹಿನಿಗಳಲ್ಲಿ ಪ್ರಚಲಿತ ವಿದ್ಯಮಾನಗಳ ಕುರಿತು ಚರ್ಚೆ ನಡೆಯುತ್ತಿದೆ. ಇದು ಬಹುತೇಕ ರಾಜಕೀಯ ವಿದ್ಯಮಾನಗಳ ವಿಸ್ತೃತ ವಿಶ್ಲೇಷಣೆ ಆಗಿರುವುದರಿಂದ ಪಕ್ಷದ ವಕ್ತಾರರು ಈ ವೇದಿಕೆಯನ್ನು ವೀಕ್ಷಕರಿಗೆ ವಿವರಿಸಲು ಉಪಯೋಗಿಸಬೇಕು. ಇದು ಎದುರಾಳಿಯನ್ನು ಸೋಲಿಸುವ ಹಟಕ್ಕಿಂತಲೂ ತಮ್ಮ ಪಕ್ಷದ ನಿಲುವನ್ನು ಜನರಿಗೆ ವಿವರಿಸಲು ಉಪಯೋಗಿಸುವುದು, ಮತ್ತೊಬ್ಬರು ಇದರ ಲೋಪದೋಷಗಳನ್ನು ಅನಾವರಣಗೊಳಿಸುವುದು ನಡೆಯಬೇಕು. ಇವರೆಲ್ಲರ ವಾದವಿವಾದ ಕೇಳಿದ ವೀಕ್ಷಕ ತನ್ನದೇ ಒಂದು ನಿಲುವನ್ನು ತಾಳುತ್ತಾನೆ. ಇದಕ್ಕೆ ಸಹಕಾರಿಯಾಗುವಂತೆ ವಾದವಿವಾದ ನಡೆದರೆ ಅದೊಂದು ಅರ್ಥ ಪೂರ್ಣ.

ಆದರೆ ಇಲ್ಲಿ ಬಹುತೇಕ ವಾದಿಗಳು ವೀಕ್ಷಕರನ್ನೇ ಮರೆತು ತಮಗೆ ತೋಚಿದಂತೆ ಕೂಗಾಡುತ್ತಾರೆ. ಒಬ್ಬ ಸಂಯಮ ಕಳೆದುಕೊಂಡು ಏರು ಧ್ವನಿಯಲ್ಲಿ ಕೂಗಾಡುವುದು. ಇದನ್ನು ಮಧ್ಯದಲ್ಲೇ ತಡೆಯಲು ವಿಫಲರಾಗಿ ಅದಕ್ಕೂ ಏರುಧ್ವನಿಯಲ್ಲಿ ಇನ್ನೊಬ್ಬರ ಬಾಯಿ ಮುಚ್ಚಿಸಲು ಯತ್ನಿಸುವುದು.. ಇದನ್ನು ನೋಡುತ್ತಿದ್ದರೆ ಇದು ಒಂದು ಚರ್ಚೆಯೋ ಹೊಡೆದಾಟವೋ ಎಂದು ಬೇಸರಗೊಂಡು. ವೀಕ್ಷಕರು ಚಾನೆಲ್ ಬದಲಾಯಿಸುವಂತಾಗಬಾರದು. ಇನ್ನು ಪ್ರತಿ ಚಾನೆಲ್‌ನಲ್ಲೂ, ಪ್ರತಿ ಚರ್ಚೆಗೂ ಅದೇ ಮುಖಗಳು. ಹೊಸ ಮುಖ, ಹೊಸ ರೀತಿ ವಿಚಾರ ಮಂಡನೆ, ಪ್ರತಿ ಚರ್ಚೆಯಲ್ಲೂ ಹೊಸ ಚೈತನ್ಯ ತುಂಬುವುದಿಲ್ಲವೇ?

–ಸತ್ಯಬೋಧ, ಬೆಂಗಳೂರು

## ಚೆಂದದ ಚಂದನ

ಚಂದನ ವಾಹಿನಿ ನಾಡಿನ ಹೆಮ್ಮೆಯ ನಾಡಿ. ಚೆಂದದ ವನದಲ್ಲಿ ಎಲ್ಲವೂ ಇರುವಂತೆ ಇಲ್ಲಿಯೂ ಎಲ್ಲವೂ ಇದೆ. ಸಾಹಿತ್ಯ, ಸಂಗೀತ, ಕಲೆ, ಆರೋಗ್ಯ, ಕೃಷಿಯ ಜೊತೆಗೆ ಬದುಕನ್ನು ರೂಪಿಸುವ ಜೀವನ ದರ್ಶನ. ಸುಂದರ ಬೆಳಗಿನ ಹೊಸ ಅಚ್ಚರಿಯ ಶುಭೋದಯ ಕರ್ನಾಟಕವಂತೂ ಅದ್ಭುತ. ಸಾಧಕರನ್ನು ಆಮಂತ್ರಿಸಿ ಅವರ ಜೀವನ, ಸಾಧನೆಯ ಯಶೋಗಾಥೆಯನ್ನು ವೀಕ್ಷಕರಿಗೆ ನೀಡುವ ಒಳ್ಳೆಯ ಕಾರ್ಯಕ್ರಮ. ಇನ್ನೂರರ ಸಂಚಿಕೆಯ ಅವಲೋಕನವಂತೂ ಅರ್ಥಪೂರ್ಣವಾಗಿ ಮೂಡಿ ಬಂತು. ಚಂದನದ ಚೆಂದ ಹೆಚ್ಚಲಿ.

– ತಾರಾ ಹೆಗಡೆ, ಶಿರಸಿ

## ವೀಕ್ಷಕರು ಮೂರ್ಖರೇ?

'ಒಬ್ಬ ಮನುಷ್ಯನನ್ನು ನೂರು ದಿನ ಮೂರ್ಖನನ್ನಾಗಿ ಮಾಡಬಹುದು; ನೂರು ಜನರನ್ನು ಒಂದು ದಿನ ಮೂರ್ಖರನ್ನಾಗಿ ಮಾಡಬಹುದು. ಆದರೆ ನೂರು ಜನರನ್ನು ನೂರು ದಿನ ಮೂರ್ಖರನ್ನಾಗಿ ಮಾಡುವುದು ಸಾಧ್ಯವಿಲ್ಲ' ಎಂದು ಹೇಳುತ್ತಾರೆ. ಆದರೆ 'ಅಗ್ನಿ ಸಾಕ್ಷಿ' ಧಾರಾವಾಹಿಯಲ್ಲಿ ಈ ಹೇಳಿಕೆಯನ್ನು ಸುಳ್ಳಾಗಿಸಿದ್ದಾರೆ. ದಿನವೂ ಕೌಶಿಕ್ ಫೋನ್ ಮಾಡಿದರೂ ಯಾವ ಟವರ್‌ನಿಂದ ಬಂದಿದೆ ಎಂದು ತಿಳಿದುಕೊಳ್ಳಲು ಸಾಧ್ಯವಿಲ್ಲವೇ? ಪೊಲೀಸ್ ಮತ್ತು ಖಾಸಗಿ ಪತ್ತೆದಾರರು ಜೊತೆಯಲ್ಲಿದ್ದರೂ ಕಂಡುಹಿಡಿಯಲು ಸಾಧ್ಯವಾಗಲಿಲ್ಲ. ದುಷ್ಟರಿಗೆ ಸೋಲೇ ಇಲ್ಲವೇ?

– ಹೆಚ್. ವಿ. ಕೃಷ್ಣಮೂರ್ತಿ, ಬೆಂಗಳೂರು

## ಕೆಸರಿನ ನಡುವೆ ಸುಂದರ ಕಮಲ

ಸಣ್ಣ ಪುಟ್ಟ ಲೋಪಗಳಿರಬಹುದು, ಆದರೆ 'ಮಗಳು ಜಾನಕಿ' ಒಂದು ಅತ್ಯುತ್ತಮ ಧಾರಾವಾಹಿ ಎಂದರೆ ತಪ್ಪಲ್ಲ. ಅದೇ ರೀತಿ ಸೀತಾರಾಂ ಅವರು ಸಹ ಒಬ್ಬ ಅತ್ಯುತ್ತಮ ನಿರ್ದೇಶಕರು. ಧಾರಾವಾಹಿ ಆರಂಭವಾದ ತಿಂಗಳಲ್ಲೇ ಮನೆಗೆ ಬಂದ ಚಾರುಲತಾಳೆ ತನ್ನ ಮಗಳು ಜಾನಕಿ ಎಂದು ತಿಳಿದಾಗ ಸೀತಾರಾಂ ತಳಮಳ ನಟನೆಯಲ್ಲೂ ಸೈ ಎನಿಸಿತು. ಉಳಿದ ಧಾರಾವಾಹಿಗಳ ನಿಗೂಢತೆಯಂತೆ ಇದರಲ್ಲಿಯೂ ಜಾನಕಿ ಮಗಳೆಂದು ತಿಳಿಸಲು ವರ್ಷಗಳನ್ನು ತೆಗೆದುಕೊಳ್ಳಲಿಲ್ಲ ಎಂಬುದೇ ಸಂತೋಷದ ವಿಷಯ. ನಿಜಕ್ಕೂ ದಿನದಿಂದ ದಿನಕ್ಕೆ ಕುತೂಹಲ ಮೂಡಿಸುತ್ತಿದೆ ಮಗಳು ಜಾನಕಿ.

–ಎನ್.ಎಸ್. ಚಂದ್ರಶೇಖರ್, ಬೆಂಗಳೂರು